# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

# ಸಿ.ಸಿ. ಸಂಖ್ಯೆ: 320/2014

| | | | |
|---|---|---|---|
| ಸಾಕ್ಷಿದಾರರ ಹೆಸರು | ಬಸವಯ್ಯ ಎಂ ಬಿ | ಪ್ರಮಾಣ ಮಾಡಿದ ದಿನಾಂಕ | 15.04.2023 |
| ತಂದೆಯ ಹೆಸರು | ಬಸವಯ್ಯ | | |
| ವಯಸ್ಸು | 67 ವರ್ಷ | | |
| ವೃತ್ತಿ | ನಿವೃತ್ತ ಅರಣ್ಯ ವೀಕ್ಷಕ | ಚಾಸಾ | 2 |
| ವಾಸಸ್ಥಳ | ಮದ್ದಯ್ಯನಹುಂಡಿ | ಪ್ರಾಸಾ | 3 |

## **EVIDENCE BEFORE CHARGE**

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :-**

ನಾನು 2003 ರಿಂದ 2015 ರವರೆಗೆ ಮದ್ದೂರು ಅರಣ್ಯ ವಲಯದಲ್ಲಿ ಅರಣ್ಯ ವೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 30.11.2008 ರಂದು ನಾವು ಅರಣ್ಯವನ್ನು ಗಸ್ತು ಮಾಡಿಕೊಂಡು ಹೋಗುತ್ತಿದ್ದಾಗ ನಾನು, ಚಾಸಾ 1, 3, 4 ರವರು ಗಸ್ತು ಮಾಡಿಕೊಂಡು ಹೋಗುತ್ತಿದ್ದಾಗ ಏನೋ ಎಳೆದುಕೊಂಡು ಹೋದಂತೆ ಒಂದು ಗುರುತು ಕಂಡುಬಂತು. ಆ ಗುರುತನ್ನು ನೋಡಿಕೊಂಡು ಮುಂದೆ – ಮುಂದೆ ಹೋದಂತೆ ರಕ್ತದ ಕಲೆ ಎರಡು ಅಡಿ ಅಗಲದಲ್ಲಿ ಕಂಡುಬಂತು. ಆ ರಕ್ತವನ್ನು ನೋಡಿ ಆ ರಕ್ತದ ಕಲೆಯ ಸ್ಥಳದ ಅಕ್ಕ – ಪಕ್ಕದಲ್ಲಿ ಪರಿಶೀಲಿಸಿರುತ್ತೇವೆ. ಆ ವೇಳೆಯಲ್ಲಿ ತುಂಡಾದ ಜಿಂಕೆಯ ಎರಡು ಕಾಲುಗಳು ಸಿಕ್ಕಿರುತ್ತವೆ. ಜಿಂಕೆಯ ಕರಳು ಬಿದ್ದಿತ್ತು. ನಂತರ ಅಕ್ಕ – ಪಕ್ಕ ಪುನಃ ಪರಿಶೀಲಿಸಿರುತ್ತೇವೆ. ಬೇರೆ ಯಾರೂ ಸಿಗಲಿಲ್ಲ. ಸ್ಥಳದಲ್ಲಿ ಬಿದ್ದಿಂತಹ ರಕ್ತದ ಕಲೆಗಳು, ಕರಳು ಮತ್ತು ಜಿಂಕೆಯ ತುಂಡಾದ ಕಾಲುಗಳನ್ನು ಅರಣ್ಯ ಇಲಾಖೆಯು ನೀಡಿದಂತೆ ಕ್ಯಾಮೆರಾದಲ್ಲಿ ಸೆರೆ

ಹಿಡಿದಿರುತ್ತೇವೆ. ಸ್ಥಳದಲ್ಲಿ ಅದರ ಮಹಜರ್ ನ ಬರವಣಿಗೆ ಮಾಡಿರುತ್ತೇವೆ. ಈ ಕೃತ್ಯವನ್ನು ಯಾರೋ ಅವೇಳೆಯಲ್ಲಿ ಮಾಡಿರಬಹುದು ಎಂದು ಊಹಿಸಿಕೊಂಡು ಮಹಜರ್ ಮಾಡಿ ಸದರಿ ಸ್ಥಳದಲ್ಲಿದ್ದ ಎರಡು ತುಂಡಾದ ಕಾಲುಗಳನ್ನು ವಶಪಡಿಸಿಕೊಂಡೆವು. ನಂತರ ಕಛೇರಿಗೆ ತಂದು ತಲುಪಿಸಿರುತ್ತೇವೆ. ಸದರಿ ಮಹಜರನ್ನು ನಾವು 12.45 ರಿಂದ 1030 ರವರೆಗೆ ಮಾಡಿರುತ್ತೇವೆ. ಗಸ್ತಿಗೆ ಹೋದಾಗ 11 ಗಂಟೆಯಾಗಿತ್ತು. ಟೇಪಿನಲ್ಲಿ ಅಳತೆ ಮಾಡಿರುತ್ತೇವೆ.

ಸಾಕ್ಷಿಯು ಸದರಿ ನಿಪಿ 1 ರ ಮಹಜರ್ ನಲ್ಲಿರುವ ಸಹಿಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 1(ಬಿ) ಎಂದು ಗುರ್ತಿಸಲಾಯಿತು. ನಂತರ ಮಾರನೇ ದಿನ ಕೇರಳ ಪೊಲೀಸರು ಜಿಂಕೆಯನ್ನು ಕೊಂದು ತಂದ ವಿಚಾರವಾಗಿ ಆರೋಪಿಗಳು ಸಿಕ್ಕಿರುತ್ತಾರೆ ಎಂದು ನಮ್ಮ ಕಛೇರಿಗೆ ತಿಳಿಸಿರುತ್ತಾರೆ. ನಂತರ ಕೇರಳ ಅರಣ್ಯಾಧಿಕಾರಿಗಳು ತಮ್ಮ ರಾಜ್ಯದಲ್ಲಿ ಪ್ರಕರಣ ದಾಖಲು ಮಾಡಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇವೆ ಎಂಬುದಾಗಿ ತಿಳಿಸಿರುತ್ತಾರೆ. ನಂತರ ನಾವು ಘಟನೆಯು ನಮ್ಮ ರಾಜ್ಯದಲ್ಲಿ ನಡೆದಿದೆ ಮತ್ತು ನಮ್ಮ ಅರಣ್ಯದ ವ್ಯಾಪ್ತಿಯಲ್ಲಿ ನಡೆದಿದೆ ಎಂದು ತಿಳಿಸಿ ಆರೋಪಿಗಳನ್ನು ಬಾಡಿ ವಾರಂಟಿನ ಮೇಲೆ ಕರೆದುಕೊಂಡು ಬಂದಿರುತ್ತೇವೆ. ಬಾಡಿ ವಾರೆಂಟಿನ ಮೇಲೆ ಕರೆದುಕೊಂಡು ಬಂದು ನಂತರ ನಮ್ಮ ಕಛೇರಿಗೆ ನಾಲ್ಕು ಜನ ಆರೋಪಿಗಳನ್ನು ಕರೆದುಕೊಂಡು ಬಂದಿರುತ್ತೇವೆ.

ಕಛೇರಿಯಲ್ಲಿ ಚಾಸಾ 5 ರವರು ವಿಚಾರಣೆ ಮಾಡಿದಾಗ ಆರೋಪಿಗಳು ತಾವು ಜಿಂಕೆಯನ್ನು ಕೊಂದ ಸ್ಥಳವನ್ನು ತೋರಿಸುವುದಾಗಿ ಹೇಳಿದ ಮೇರೆಗೆ ಆರೋಪಿಗಳನ್ನು ಕರೆದುಕೊಂಡು ಹೋಗಿರುತ್ತೇವೆ. ಆರೋಪಿಗಳು ಆ ಜಾಗವನ್ನು ತೋರಿಸಲು ಮುಂದೆ – ಮುಂದೆ ಹೋದಂತೆ ನಾಹಿ ಹಿಂಬಾಲಿಸಿಕೊಂಡು ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಘಟನಾ ಸ್ಥಳವನ್ನು ಆರೋಪಿಗಳು ತೋರಿಸಿರುತ್ತಾರೆ. ಆರೋಪಿಗಳು ನಾವು ಈ ಮೊದಲು ನಿಪಿ 1 ರಂತೆ ಮಾಡಿದ ಮಹಜರ್ ಸ್ಥಳವನ್ನೇ ಪುನಃ ಕರೆದುಕೊಂಡು ಹೋಗಿ ತೋರಿಸಿರುತ್ತಾರೆ. ಸ್ಥಳದಲ್ಲಿ ಆರೋಪಿಗಳು ಗುಂಡಿಕ್ಕಿ ಜಿಂಕೆಯನ್ನು ಕೊಂದಿರುವುದಾಗಿ ತಿಳಿಸಿರುತ್ತಾರೆ. ಕತ್ತನ್ನು ಕತ್ತರಿಸಿ ಬಿಸಾಕಿರುತ್ತಾರೆಂದರೆ, ಕರಳನ್ನು ಮತ್ತು ಎರಡು ಕಾಲುಗಳನ್ನು ಎರಡು ತುಂಡಾಗಿ ಬಿಸಾಕಿರುತ್ತೇವೆ ಎಂದು ಹೇಳಿರುತ್ತಾರೆ. ನಮಗೆ ನಿಪಿ 1 ರಂತೆ ಕರಳು ಮತ್ತು ಎರಡು ಕಾಲುಗಳು ಸಿಕ್ಕಿದ್ದು ತಲೆ

ಸಿಕ್ಕಿರುವುದಿಲ್ಲ. ನಂತರ ಆರೋಪಿಗಳು ಮುಂದುವರೆದು ಸದರಿ ಸ್ಥಳದಲ್ಲಿ ಜಿಂಕೆಯನ್ನು ಕೊಂದ ನಂತರ ಎರಡು ತುಂಡುಗಳಾಗಿ ಮಾಡಿ ಕಾರಿನ ಡಿಕ್ಕಿಯಲ್ಲಿ ಹಾಕಿರುತ್ತೇವೆ ಎಂದು ಹೇಳಿರುತ್ತಾರೆ. ಆ ಕಾರ್ ನಂ. ಕೆಎಲ್ 10 ಇ 5072 ಎಂಬುದಾಗಿ ಹೇಳಿರುತ್ತಾರೆ. ಚಾಲಕನ ಹೆಸರು ಹೇಳಿದ ಬಗ್ಗೆ ಗೊತ್ತಿಲ್ಲ. ಸ್ಥಳದಲ್ಲಿ ಮಹಜರನ್ನು 10 ರಿಂದ 10.45 ರವರೆಗೆ ಮಾಡಿರುತ್ತೇವೆ.

ಸಾಕ್ಷಿಯು ನಿಪಿ 3 ರಲ್ಲಿರುವ ಸಹಿಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 3(ಸಿ) ಎಂದು ಗುರ್ತಿಸಲಾಯಿತು. ನಿಪಿ 3 ನ್ನು ಮಾಡುವಾಗ ಚಾಸಾ 5, 6, ನಾನು ಮತ್ತು ಚಾಸಾ 1 ಇದ್ದೆವು. ಆ ಕಾರನ್ನು ನೋಡಿದರೆ ಗುರ್ತಿಸಬಲ್ಲೆ. ವಶಪಡಿಸಿಕೊಂಡ ಕಾಲುಗಳನ್ನು ನೋಡಿದರೆ ಗುರ್ತಿಸಬಲ್ಲೆ, ಆದರೆ ಅವುಗಳನ್ನು ಅನುಮತಿಯ ಮೇರೆಗೆ ನಾಶಪಡಿಸಲಾಗಿದೆ. ಆರೋಪಿಗಳನ್ನು ನೋಡಿದರೆ ಗುರ್ತಿಸಬಲ್ಲೆ. ಈ ದಿನ ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿಗಳನ್ನು ನೋಡಿ ಗುರ್ತಿಸಿರುತ್ತಾರೆ. 3 ನೇ ಆರೋಪಿ ಗೈರು ಹಾಜರಿದ್ದು ಗುರ್ತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ನುಡಿದ ಕಾರಣ ಅವರ ವಿನಾಯಿತಿ ಅರ್ಜಿಯನ್ನು ಪುರಸ್ಕರಿಸಲಾಯಿತು. 4 ನೇ ಆರೋಪಿಯು ಮೃತಪಟ್ಟಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಗಿದೆ)

**ಪಾಟೀ ಸವಾಲು :– ಮಾನ್ಯ ಎಪಿಪಿಯವರಿಂದ :–**

ಜಿಂಕೆ ಕಾಲುಗಳನ್ನು ಟೇಪಿನಿಂದ ಅಳತೆ ಮಾಡಿರುತ್ತೇವೆ ಎಂದರೆ ಸರಿ. ಅದಕ್ಕೆ ಕ್ರಮ ಸಂಖ್ಯೆ ಕೊಟ್ಟಿರುತ್ತೇವೆ ಎಂದರೆ ಸರಿ. 1 ನೇ ಕ್ರಮ ಸಂಖ್ಯೆಯಲ್ಲಿ 0.39x 0.10 ಮೀಟರ್ ಇತ್ತು ಎಂದರೆ ಸರಿ. ಮತ್ತೊಂದರಲ್ಲಿ 0.31 x 0.09 ಮೀಟರ್ ಇತ್ತು ಎಂದರೆ ಸರಿ. ಈ ಬಗ್ಗೆ ನಿಪಿ 1 ರಲ್ಲಿ ತೋರಿಸಿರುತ್ತಾರೆ ಎಂದರೆ ಸರಿ. ಆರೋಪಿಗಳು ಹೇಳಿಕೆ ಕೊಡುವಾಗ 1 ನೇ ಆರೋಪಿ ಜಿಂಕೆಯನ್ನು ಗುಂಡಿಟ್ಟು ಕೊಂದಿರುವುದಾಗಿ ಹೇಳಿರುತ್ತಾರೆ ಎಂದರೆ ಸರಿ. ಅಬ್ದುಲ್ ರೆಹಮಾನ್ ಮತ್ತು ಅಬ್ದುಲ್ ಮಜೀದ್ ಜಿಂಕೆಯ ಕತ್ತನ್ನು ಮತ್ತು ಕರಳನ್ನು ಕತ್ತರಿಸಿ ಬಿಸಾಕಿರುತ್ತೇವೆ ಎಂದು

ಹೇಳಿರುತ್ತಾರೆ ಎಂದರೆ ಸರಿ. ಅಜ್ಮಲ್ ಎಂಬುವವರು ಆ ದಿನ ಕಾರಿನ ಚಾಲಕನಾಗಿದ್ದ ಎಂದು ತಿಳಿಸಿದರು ಎಂದರೆ ಸರಿ.  ಆರೋಪಿಯು ಮಹಜರ್ ನ ವೇಳೆಯಲ್ಲಿ ಹಾಜರಿದ್ದು ಸ್ಥಳ ತೋರಿಸಿ ನಂತರ ನಿಪಿ 3 ಕ್ಕೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ಆ ಸಹಿಗಳೇ ನಿಪಿ 3(ಸಿ) ಯಿಂದ 3(ಎಫ್) ಎಂದರೆ ಸರಿ.

**ಪಾಟೀ ಸವಾಲು :- ದೋಷಾರೋಪಣಾ ರಚಿಸಿದ ನಂತರ ಪಾಟೀ ಸವಾಲು ಮಾಡುವುದಾಗಿ ಕೋರಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ